90, ದಿನಾಂಕ 6–8–90ರ ಪ್ರಕಾರ ಸಂಖ್ಯಾತಿರಿಕ್ತ ಹುದ್ದೆಗಳಲ್ಲಿ ಸಕ್ರಮಗೊಂಡು ಆ ಹುದ್ದೆಗಳಲ್ಲಿ ಸಲ್ಲಿಸಿದ ಸೇವೆಯನ್ನು ಜೇಷ್ಠತೆಗಾಗಿ ಪರಿಗಣಿಸಲು ಅವಕಾಶವಿರುವುದಿಲ್ಲ

ಈ) ಪ್ರಶ್ನೆ 'ಆ' ಮತ್ತು 'ಇ' ಗೆ ನೀಡಿದ ಉತ್ತರ ಅನ್ವಯವಾಗುತ್ತದೆ

ಕರ್ನಾಟಕ ವಿಧಾನ ಸಭೆ

1190 ಶ್ರೀ ಹೆಚ್ ಎಸ್ ಶಂಕರ ಲಿಂಗೇಗೌಡ (ಚಾಮರಾಜ) – ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಬಂದಿರುವ ದೂರುಗಳು ಎಷ್ಟು,

ಆ) ಈ ದೂರುಗಳ ಬಗ್ಗೆ ಇಲಾಖೆ ಯಾವ ಯಾವ ಕ್ರಮಕೈಗೊಂಡಿದೆ,

ಇ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯ ತಡೆ/ನಿಯಂತ್ರಣಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಸಿ ಚೆನ್ನಿಗಪ್ಪ (ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) –

ಅ) ಮೈಸೂರು ಜಿಲ್ಲೆಯಾದ್ಯಂತ ದಿನಾಂಕ 1–4–06 ರಿಂದ 31–3–07 ರವರೆಗೆ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೇರ ವ್ಯಾಪ್ತಿಯಲ್ಲಿ 32 ದೂರುಗಳು ಸ್ವೀಕೃತವಾಗಿರುತ್ತದೆ

ಆ) ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ವಿರುದ್ಧ ಕ್ರಮ ಕೈಗೊಳ್ಳಲು ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1981 ಅಡಿಯಲ್ಲಿ ಕ್ರಮ ಜರುಗಿಸಲು ಶಾಸನ ಬದ್ಧ ಸಂಸ್ಥೆಯಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧಿಕಾರ ಪ್ರದತ್ತವಾಗಿರುತ್ತದೆ ದೂರುಗಳಿಗೆ ಸಂಬಂಧಿಸಿದಂತೆ ಸದರಿ ಕಾಯ್ದೆ ಗಳಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಮ ಕೈಗೊಂಡಿದ್ದು ವಿವರಗಳನ್ನು ಅನಬಂಧ–1ರಲ್ಲಿ ಒದಗಿಸಿದೆ

ಇ)

• ಮೈಸೂರು ಜಿಲ್ಲೆಯಾದ್ಯಂತ ಹಾಗೂ ಕರ್ನಾಟಕದಾದ್ಯಂತ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1974, ವಾಯು (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1981, ಹಾಗೂ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳು, 2000 ಇವುಗಳನ್ನು ಜಾರಿಗೊಳಿಸುತ್ತಿದೆ

• ಜಲ ಕಾಯ್ದೆ ಹಾಗೂ ವಾಯು ಕಾಯ್ದೆಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಗಳು ತಮ್ಮಲ್ಲಿ ಉತ್ಪತ್ತಿಯಾಗುವ ಗೃಹ ಬಳಕೆಯ ಹಾಗೂ ಕೈಗಾರಿಕಾ ಕಾರ್ಯ ಚಟುವಟಿಕೆಗಳ ತ್ಯಾಜ್ಯ ನೀರನ್ನು ಹಾಗೂ ಕಲುಷಿತವಾದ ಹೊಗೆಯನ್ನು ವಾತಾವರಣಕ್ಕೆ ಬಿಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

• ಹಾಗೆಯೇ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳು, 2000 ಇದರ ಅಡಿಯಲ್ಲಿ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕೃತ ಪತ್ರ ಪಡೆಯಬೇಕಾಗಿರುತ್ತದೆ

• ಜಲ ಕಾಯ್ದೆಯಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರವನ್ನು ನೀಡುವಾಗ ಉದ್ದಿಮೆಗಳು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ಅಳವಡಿಸಿ, ಶುದ್ಧೀಕರಿಸಿದ ನೀರನ್ನು ಅವುಗಳಿಗೆ ನಿಗದಿಪಡಿಸಿರುವ ಮಾನಕಗಳನ್ನು ಮೀರದಂತೆ ಹೊರ ಚೆಲ್ಲುವಂತೆ ನಿಬಂಧನೆಗಳನ್ನು ನಿಗದಿಪಡಿಸಲಾಗುತ್ತದೆ ಹಾಗೂ ಸಂಸ್ಕರಿಸಿದ ನೀರನ್ನು ತೋಟಗಾರಿಕೆಗಾಗಿ ಅಥವಾ ಕೈಗಾರಿಕಾ ಚಟುವಟಿಕೆಗಳಿಗೆ ಪುನರ್ಬಳಕೆ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉದ್ದಿಮೆಗಳಿಗೆ ನಿರ್ದೇಶಿಸಲಾಗುತ್ತದೆ

• ವಾಯು ಕಾಯ್ದೆಯಡಿಯಲ್ಲಿ ಕೂಡ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರ ಪಡೆಯುವಾಗ ವಾಯು ಮಾಲಿನ್ಯದ

ಮೂಲಗಳಿಂದ ಬರುವ ಕಲುಷಿತ ಹೊಗೆಯನ್ನು ತಡೆಗಟ್ಟಲು ಸೂಕ್ತ ಎತ್ತರವಿರುವ ಚಿಮಣಿಗಳನ್ನು ಹಾಗೂ ವಾಯು ಮಾಲಿನ್ಯ ಉಪಕರಣಗಳನ್ನು ಅಳವಡಿಸಬೇಕಾಗಿರುತ್ತದೆ ಈ ರೀತಿ ಅಗತ್ಯ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸಿದ ನಂತರವೆ ಮಂಡಳಿಯಿಂದ ಉದ್ದಿಮೆಗಳಿಗೆ ಸಮ್ಮತಿ ಪತ್ರಗಳನ್ನು ನೀಡಲಾಗುತ್ತದೆ

• ಮುಂದುವರಿದಂತೆ, ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳಡಿಯಲ್ಲಿ ಉದ್ದಿಮೆಗಳಿಗೆ ಅಧಿಕೃತ ಪತ್ರ ನೀಡುವಾಗಲೂ ಸಹ ಅಪಾಯಕಾರೀ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿಯಮಗಳಿಗನುಸಾರವಾಗಿ ಸಂಗ್ರಹಿಸಿಡುವ ಷರತ್ತುಗಳಿಗನುಗುಣವಾಗಿ ನೀಡಲಾಗುತ್ತದೆ

• ಒಂದು ವೇಳೆ ಮಂಡಳಿಯು ನಿಗದಿ ಪಡಿಸಿದ ನಿಬಂಧನೆಗಳನ್ನು ಉದ್ದಿಮೆಯು ಉಲ್ಲಂಘಿಸಿದಲ್ಲಿ ಮೇಲಿನ ನಿಯಮಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಯ ಮೇಲೆ ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಹಾಗೂ ಗಂಭೀರ ಸನ್ನಿವೇಶಗಳಲ್ಲಿ ಉದ್ದಿಮೆಗಳಿಗೆ ಮುಚ್ಚುವ ಆದೇಶಗಳನ್ನೂ ಸಹ ನೀಡಲಾಗುತ್ತದೆ

• ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಾದ್ಯಂತ ಪರಿಸರ ಕಾಯ್ದೆಗಳನ್ನು ಉಲ್ಲಂಘಿಸಿದ ಉದ್ದಿಮೆಗಳ ವಿರುದ್ಧ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗಿರುತ್ತದೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿರುವ ಉದ್ದಿಮೆಗಳ ಸಂಖ್ಯೆ 6 ಮುಚ್ಚುವ ಆದೇಶಗಳನ್ನು ಜಾರಿಗೊಳಿಸಲಾಗಿರುವ ಉದ್ದಿಮೆಗಳ ಸಂಖ್ಯೆ 9 ಇವುಗಳ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ